ಸಂಸ್ಥೆಗಳಿಗೆ 2008–09, 2009–10 ಹಾಗೂ 2010–11ನೇ ಸಾಲಿನಲ್ಲಿ ರೂ.212.00 ಲಕ್ಷಗಳನ್ನು ಅನುದಾನವಾಗಿ ನೀಡಲಾಗಿದೆ.

3) ಅಂತರರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾಗವಹಿಸಿದ ರಾಜ್ಯದ ಕ್ರೀಡಾಪಟುಗಳ ವಿಮಾನ ಯಾನದ ಮತ್ತು ಇತರೆ ವೆಚ್ಚದ ಬಾಬ್ತನ್ನು 2008–09, 2009–10 ಹಾಗೂ 2010–11ನೇ ಸಾಲಿನಲ್ಲಿ ರೂ.100.91 ಲಕ್ಷಗಳನ್ನು 190 ಕ್ರೀಡಾಪಟುಗಳಿಗೆ ಸಹಾಯಧನವಾಗಿ ನಿಡಲಾಗಿರುತ್ತದೆ.

4) ವಿವಿಧ ಜಿಲ್ಲೆಗಳಿಗೆ, ಸಂಘ–ಸಂಸ್ಥೆ/ಶಾಲಾ–ಕಾಲೇಜುಗಳಿಗೆ 2008–09, 2009–10 ಹಾಗೂ 2010–11ನೇ ಸಾಲಿನಲ್ಲಿ ರೂ.57.68 ಲಕ್ಷಗಳನ್ನು ಕ್ರೀಡಾ ಪ್ರಾಧಿಕಾರದಿಂದ ಕ್ರೀಡಾ ಸಲಕರಣೆಗಳನ್ನು ಖರೀದಿಸಿ ಒದಗಿಸಲಾಗಿರುತ್ತದೆ.

ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿ

46 (188) ಶ್ರೀ ಕುಮಾರಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ):– ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿವಮೊಗ್ಗ ವಿಮಾನ ನಿಲ್ದಾಣ ಕಾಮಗಾರಿ ನಿರ್ವಹಣೆಯನ್ನು ಯಾವ ಸಂಸ್ಥೆಗೆ ವಹಿಸಲಾಗಿದೆ; ನಿರ್ಮಾನದ ಒಟ್ಟು ವೆಚ್ಚವೆಷ್ಟು; 2007 ರಿಂದ 2011ರವರೆಗೆ ಬಿಡುಗಡೆ ಮಾಡಲಾದ ಅನುದಾನವೆಷ್ಟು;

ಆ) ಈ ಯೋಜನೆಯ ವಿವಿಧ ಕಾಮಗಾರಿಗಳು ಯಾವ ಹಂತದಲ್ಲಿದೆ ಹಾಗೂ ಹಾಲಿ ನಿರ್ಮಾಣವಾಗಿರುವ ರನ್‌ವೇಯಲ್ಲಿ ಪ್ರಯೋಗಿಕವಾಗಿ ವಿಮಾನ ಹಾರಾಟವನ್ನು ಯಾವಾಗ ಪ್ರಾರಂಭಿಸಲಾಗುವುದು;

ಶ್ರೀ ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿ ಕಾಮಗಾರಿಯನ್ನು IL & FS ಮತ್ತು M/s Comet Infrastructure ಒಳಗೊಂಡ consortium ನಿಂದ ರಚಿಸಲಾಗಿರುವ ಒಂದು ವಿಶೇಷ ಉದ್ದೇಶಿತ ವಾಹಕ (SPV) ಶಿವಮೊಗ್ಗ ವಿಮಾನ ನಿಲ್ದಾಣ ಅಭಿವೃದ್ಧಿದಾರರು ಪ್ರೈ.ಲಿ. (SADPL) ಈ ಸಂಸ್ಥೆಗೆ ವಹಿಸಲಾಗಿದೆ. ಈ ವಿಮಾನ ನಿಲ್ದಾಣಕ್ಕಾಗಿ ಜಮೀನನ್ನು ಸರ್ಕಾರದಿಂದ ಗುತ್ತಿಗೆ ಆಧಾರದ ಮೇಲೆ ನೀಡಲಾಗುತ್ತಿದ್ದು ಉಳಿದಂತೆ ಯೋಜನೆಯನ್ನು ಅಭಿವೃದ್ಧಿದಾರರು ರೂ.90.00 ಕೋಟಿ ವೆಚ್ಚದಲ್ಲಿ ನಿರ್ಮಿಸಲು ಉದ್ದೇಶಿಸಿರುತ್ತಾರೆ. ಈ ಯೋಜನೆಗಾಗಿ ಅಗತ್ಯವಿರುವ ಜಮೀನಿನ

ಭೂಸ್ವಾಧೀನಕ್ಕಾಗಿ ಸರ್ಕಾರದಿಂದ ಈ ವರೆಗೂ ರೂ. 25.98 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ.

ಆ) 1. ಶಿವಮೊಗ್ಗ ವಿಮಾನ ನಿಲ್ದಾಣದ ಜಮೀನಿಗೆ ಕಾಂಪೌಂಡ್ ಗೋಡೆಯನ್ನು ಈಗಾಗಲೇ ನಿರ್ಮಿಸಲಾಗಿದೆ.

2. ಸಣ್ಣ ವಿಮಾನಗಳನ್ನು ಇಳಿಸುವ ಸೌಲಭ್ಯ ಕಲ್ಪಿಸಲು 1,000 ಮೀ. ಉದ್ದದ ರನ್ ವೇಯನ್ನು ಸಿದ್ಧಪಡಿಸಲಾಗಿದೆ.

3. ಈ ರನ್ ವೇ ವಿಸ್ತರಣೆ ಹಾಗೂ ಟರ್ಮಿನಲ್ ಕಟ್ಟಡ ಕಾರ್ಯಗಳು ಪ್ರಗತಿಯಲ್ಲಿದೆ.

4. ಸಣ್ಣ ವಿಮಾನಗಳ ಕಾರ್ಯಾಚರಣೆಯನ್ನು ಆದಷ್ಟು ಶೀಘ್ರವಾಗಿ ಪ್ರಾರಂಭಿಸಲು ಉದ್ದೇಶಿಸಿದೆ.

ಗರಡಿ ಮನೆಗಳ ಅಭಿವೃದ್ಧಿ

47 (189) ಶ್ರೀ ಕುಮಾರಸ್ವಾಮಿ ಕೆ.ಜಿ.(ಶಿವಮೊಗ್ಗ ಗ್ರಾಮಾಂತರ):– ಮಾನ್ಯ ಪ್ರವಾಸೋದ್ಯಮ, ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ;

ಅ) ಶಿವಮೊಗ್ಗ ಜಿಲ್ಲೆಯಲ್ಲಿರುವ ಇಲಾಖೆ ಗುರುತಿಸಿದ ಗರಡಿ ಮನೆಗಳೆಷ್ಟು; (ತಾಲ್ಲೂಕುವಾರು ಹಾಗೂ ಗ್ರಾಮವಾರು ವಿವರ ನೀಡುವುದು);

ಆ) ಕುಸ್ತಿ ಸಾಂಪ್ರದಾಯಿಕ ಕ್ರೀಡೆಯನ್ನು ಉತ್ತೇಜಿಸಲು 2007 ರಿಂದ ಜಿಲ್ಲೆಯಲ್ಲಿ ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಮಾಡಲಾದ ವೆಚ್ಚವೆಷ್ಟು; ಹಾಗೂ ಈ ಕ್ರೀಡಾಪಟುಗಳಿಗೆ ನೀಡಿದ ಸೌಲಭ್ಯಗಳು ಯಾವುವು; (ವಿವರ ಒದಗಿಸುವುದು);

ಇ) ಶಿವಮೊಗ್ಗ ಗ್ರಾಮಾಂತರ ಕ್ಷೇತ್ರದಲ್ಲಿ 2007ರಿಂದ ಕ್ರೀಡಾಂಗಣ ನಿರ್ಮಾಣ ಅಭಿವೃದ್ಧಿಗೆ ಮಾಡಲಾದ ವೆಚ್ಚವೆಷ್ಟು; (ವಿವರ ಒದಗಿಸುವುದು);

ಶ್ರೀ ಜಿ. ಜನಾರ್ಧನ ರೆಡ್ಡಿ (ಮಾನ್ಯ ಪ್ರವಾಸೋದ್ಯಮ, ಮೂಲಭೂತ ಸೌಲಭ್ಯ ಅಭಿವೃದ್ಧಿ ಹಾಗೂ ಯುವಜನ ಸೇವಾ ಸಚಿವರು):

ಅ) ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಭದ್ರಾಪುರ, ಹಳಿಯಾರ್, ಗಿಡ್ಡಯ್ಯನಗುಡಿ, ತಿಮ್ಲಾಪುರ, ಚೌಡನಾಯಕನಕೊಪ್ಪ ಗ್ರಾಮಗಳಲ್ಲಿ ಗರಡಿ ಮನೆ–ಹೀಗೆ 5 ಗರಡಿ ಮನೆಗಳನ್ನು ನಿರ್ಮಿಸಲು ಗುರುತಿಸಲಾಗಿದೆ.